## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಪ್ರತಾಪಸಿಂಹ ನಾಯಕ್ ರವರು ನಿಯಮ-72ರಡಿ ಮಂಡಿಸಿರುವ ಸಾರ್ವಜನಿಕ ಮಹತ್ವದ ವಿಷಯದ ಸೂಚನೆಗೆ ಸರ್ಕಾರದ ಹೇಳಿಕೆ

-: ಸೂಚನೆ :-

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಪೋಡಿ ಇತ್ಯರ್ಥ ಪ್ರಕ್ರಿಯೆ ಅತ್ಯಂತ ವಿಳಂಬವಾಗುತ್ತಿದ್ದು, ಮೋಜಿಣಿ ತಂತ್ರಾಂಶಕ್ಕೆ ಸರ್ವರ್ ಸಮಸ್ಯೆ, ಇಲಾಖೆಯಲ್ಲಿ ಪೋಡಿಗೆಂದೆ ಪ್ರತ್ಯೇಕ ತಂಡವಿಲ್ಲದಿರುವುದು ಸೇರಿದಂತೆ ಈ ರೀತಿಯ ಹಲವಾರು ತೊಡಕು ಮತ್ತು ಕೊರತೆಗಳ ಕಾರಣದಿಂದಾಗಿ ಜಿಲ್ಲೆಯಲ್ಲಿ ಬಹುತೇಕ ಪೋಡಿ ಇತ್ಯರ್ಥ ಪ್ರಕರಣಗಳು ಅತೀ ದೀರ್ಘಕಾಲದಿಂದ ಹಾಗೆ ಬಾಕಿ ಉಳಿದಿದ್ದು ಅರ್ಜಿದಾರರು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಡಿ ಇತ್ಯರ್ಥಕ್ಕೆ ಸಲ್ಲಿಕೆಯಾಗಿರುವ ಬಹುತೇಕ ಅರ್ಜಿಗಳು ದೀರ್ಘಕಾಲದಿಂದ ಹಾಗೆಯೇ ಬಾಕಿ ಉಳಿದಿದ್ದು, ಜಿಲ್ಲೆಯಲ್ಲಿ ಪೋಡಿ ಇತ್ಯರ್ಥಕ್ಕೆ ದೀರ್ಘಕಾಲದಿಂದ ಬಾಕಿ ಇರುವ ಸದರಿ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದ ಕಾರಣದಿಂದಾಗಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

-: ಹೇಳಿಕೆ :-

ಭೂಮಾಪನ ಇಲಾಖೆಯಲ್ಲಿ ಮೋಜಿಣಿ ತಂತ್ರಾಂಶಕ್ಕೆ ಸಂಬಂಧಿಸಿದಂತೆ ಸರ್ವರ್ ಸಮಸ್ಯೆ ಇರುವುದಿಲ್ಲ ಮತ್ತು ಭೂಮಿ ತಂತ್ರಾಂಶ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡುತ್ತಿರುವ ತಂಡದಲ್ಲಿ ಮೋಜಿಣಿ ತಂತ್ರಾಂಶದ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಪ್ರತ್ಯೇಕ ತಂಡವನ್ನು ನಿಯೋಜಿಸಲಾಗಿರುತ್ತದೆ.

ಭೂಮಾಪನ ಇಲಾಖೆಯಲ್ಲಿ ಪೋಡಿ ಕಾರ್ಯಕ್ಕಾಗಿ ಪ್ರತ್ಯೇಕ ಭೂಮಾಪಕರ ತಂಡವಿರುವುದಿಲ್ಲ, ಆದರೆ ಇಲಾಖೆಯಲ್ಲಿ ಜಾರಿಯಲ್ಲಿರುವ ದರಖಾಸ್ತು ಪೋಡಿ ಆಂದೋಲನ, ಸ್ವಮಿತ್ವ, ನಕ್ಷಾಯೋಜನೆ, ಕಂದಾಯ ಅರಣ್ಯ ಜಮೀನು ಅಳತೆ ಇತ್ಯಾದಿ ಪ್ರಮುಖ ಯೋಜನೆಗಳ ಜೊತೆಯಲ್ಲಿ ಲಭ್ಯ ಭೂಮಾಪಕರನ್ನು ಬಳಸಿಕೊಂಡು ಪ್ರಥಮ ಆದ್ಯತೆಯಾಗಿ ಸಾರ್ವಜನಿಕರು ಶುಲ್ಕ ಪಾವತಿಸಿ ಸಲ್ಲಿಸುವ ತತ್ಕಾಲ್ ಪೋಡಿ, ದರಖಾಸ್ತು ಪೋಡಿ, ಪೋಡಿ ಮುಕ್ತ ಗ್ರಾಮ ಯೋಜನೆ, ಬಗರ್ ಹುಕುಂ ಪೋಡಿ ಹಾಗೂ ಕೋರ್ಟ್ ಆದೇಶ ಇತ್ಯಾದಿ ಪ್ರಕರಣಗಳನ್ನು ಅಳತೆ ಮಾಡಲಾಗುತ್ತಿದೆ.

ಪೋಡಿ ಪ್ರಕರಣಗಳು ಬಾಕಿ ಇರಲು ಪ್ರಮುಖ ಕಾರಣಗಳು ಈ ಕೆಳಗಿನಂತಿವೆ:-

1. ಆಕಾರಬಂದು & ಪಹಣಿ ಕಾಲಂ 3 ರ ವಿಸ್ತೀರ್ಣದ ವ್ಯತ್ಯಾಸಗಳಿರುವುದು;
2. ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು;
3. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವ್ಯಾಜ್ಯಗಳು ಇರುವುದು;
4. ಪೋಡಿ ಅಂದೋಲನದ ಅರಿವಿನಿಂದಾಗಿ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗುತ್ತಿರುವುದು;

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಕಿಯಿರುವ ಪೋಡಿ ಪ್ರಕರಣಗಳ ವಿವರ ಈ ಕೆಳಕಂಡಂತಿವೆ:-

| ಪೋಡಿಯ ವಿಧ | ಒಟ್ಟು ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂಮಾಪನ ಶಾಖೆಯಲ್ಲಿ ಬಾಕಿ |
|---|---|---|---|
| ದರಖಾಸ್ತು ಪೋಡಿ | 14853 | 0 | 14853 |

| | | | |
|---|---|---|---|
| ತತ್ಕಾಲ್ ಪೋಡಿ | 5094 | 3091 | 2003 |
| ಪೋಡಿ ಮುಕ್ತ ಗ್ರಾಮ ಯೋಜನೆ | 2848 | 1760 | 1088 |
| ಕೋರ್ಟ್ ಪೋಡಿ | 59 | 24 | 35 |
| ಬಗರ್ ಹುಕುಂ ಪೋಡಿ | 10 | 0 | 10 |
| ಒಟ್ಟು | 22,864 | 4,875 | 17,989 |

ಬಾಕಿಯಿರುವ ವಿವಿಧ ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ:-

1. ದರಖಾಸ್ತು ಪೋಡಿ ಕುರಿತಂತೆ ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024 ರಲ್ಲಿ ಸರಳೀಕರಿಸಿ, ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಪೋಡಿ ದುರಸ್ತಿ ಪಡಿಸಲು ಆದೇಶಿಸಿದೆ.
2. ಈ ಹಿಂದೆ ಯಾವುದೇ ಭೂಮಂಜೂರಿ ಕಡತದಲ್ಲಿ ಪೋಡಿಗೆ ಅಗತ್ಯವಿದ್ದ ಕನಿಷ್ಠ 5 ದಾಖಲೆಗಳನ್ನು 3 ಕ್ಕೆ ಇಳಿಸಲಾಗಿದೆ.
3. ದರಖಾಸ್ತು ಪೋಡಿ ಪ್ರಕರಣಗಳಲ್ಲಿ ನಮೂನೆ 01 ರಿಂದ 05 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್ ಲೈನ್ ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ. ದರಖಾಸ್ತು ಪೋಡಿ, 11ಇ, ಹದ್ದುಬಸ್ತು ಮುಂತಾದ ಎಲ್ಲಾ ತರಹದ ಅರ್ಜಿಗಳನ್ನು ಸರ್ಕಾರಿ ಭೂಮಾಪಕರೊಂದಿಗೆ ಪರವಾನಗಿ ಭೂಮಾಪಕರನ್ನು ಸಹ ಬಳಸಿಕೊಂಡು ಅಳತೆ ಮಾಡಲು ಆದೇಶಿಸಿದೆ.
4. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದ್ದು, ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲೇ ಸರದಿ ಸಾಲಿನಂತೆ (FIFO) ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.
5. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.
6. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.
7. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೇಲಿನಂತೆ, ಪೋಡಿ ಇತ್ಯರ್ಥಕ್ಕೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಹಂತ ಹಂತವಾಗಿ ವಿಲೇವಾರಿ ಮಾಡಲು ಕ್ರಮ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಕಂಇ 16 ಎಸ್‌ಎಸ್‌ಸಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು